ದಿನಾಂಕಃ 07-09-2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಜೆ ಕೆ ಜಿ 3ನೇ ಎದುರುದಾರರ ಪರ ವಕೀಲರಿಂದಃ

ಅಪಘಾತದ ಸಮಯದಲ್ಲಿ ನನಗೆ 13 ವರ್ಷ ಎಂದು ಬರೆಸಿದ್ದೇನೆ ಅಂದರೆ ಸರಿ. ಆಗ ನಾನು 8 ನೇ ತರಗತಿಯಲ್ಲಿ ವಿಧ್ಯಾಭ್ಯಾಸ ಮಾಡುತ್ತಿದ್ದೆನು. ಈಗ ವಿಧ್ಯಾಭ್ಯಾಸ ಮಾಡುತ್ತಿಲ್ಲ. ನಾನು ರಸ್ತೆಯಲ್ಲಿ ಸೈಕಲ್ ಮೇಲೆ ಹೋಗುವಾಗ ಈ ಅಪಘಾತ ಸಂಭವಿಸಿರುತ್ತದೆ ಅಂದರೆ ಸರಿ. ನಾನೇ ನಿರ್ಲಕ್ಷತನದಿಂದ ರಾಷ್ಟ್ರೀಯ ಹೆದ್ದಾರಿಯ ಮೇಲೆ ಸೈಕಲನ್ನು ಚಾಲನೆ ಮಾಡಲು ಹೋಗಿದ್ದರಿಂದ ಅಪಘಾತವಾಗಿರುತ್ತದೆ ಅಂದರೆ ಸರಿಯಲ್ಲ. 1 ನೇ ಎದುರುದಾರನ ತಪ್ಪಿನಿಂದ ಅಪಘಾತ ಸಂಭವಿಸಿಲ್ಲ, ಆದರೆ ನನ್ನ ತಪ್ಪಿನಿಂದ ಅಪಘಾತ ಸಂಭವಿಸಿದೆ ಅಂದರೆ ಸರಿಯಲ್ಲ. ದೂರನ್ನು 3 ದಿನ ತಡವಾಗಿ ನೀಡಲಾಗಿದೆ ಅಂದರೆ ಸರಿ. ನನ್ನ ತಪ್ಪಿನಿಂದಲೇ ಅಪಘಾತದ ಸಂಭವಿಸಿರುವುದರಿಂದ 3 ದಿನ ತಡವಾಗಿ ದೂರನ್ನು ನೀಡಲಾಗಿದೆ ಅಂದರೆ ಸರಿಯಲ್ಲ.

2. ಅಪಘಾತದ ನಂತರ ಮೊದಲು ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಜಗಳೂರು ಆಸ್ಪತ್ರೆಯ ಎಂ ಎಲ್ ಸಿ ಅಥವಾ ಕೇಸ್ ಶೀಟ ದಾಖಲೆ ಹಾಜರು ಪಡಿಸಿಲ್ಲ ಅಂದರೆ ಸರಿ. ನಾನು ಮೊದಲು ಚಿಕ್ಕಹೋಗಿಹಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಈ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರದ ಪ್ರಕಾರ ನನಗೆ ಯಾವುದೇ ತೀವ್ರ ಸ್ವರೂಪದ ಗಾಯ ಅಥವಾ ತಲೆ ಅಥವಾ ಮೆದುಳಿಗೆ ಪೆಟ್ಟಾಗಿಲ್ಲ ಅಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರದಲ್ಲಿ ಮೂಳೆ ಮುರಿತದ ಬಗ್ಗೆ ನಮೂದಿಸಿಲ್ಲ ಅಂದರೆ ಗೊತ್ತಿಲ್ಲ. ಪರಿಹಾರದ ಉದ್ದೇಶದಿಂದ ಬೇರೆ ಬೇರೆ ಆಸ್ಪತ್ರೆಯ ದಾಖಲೆಗಳನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಅಂದರೆ ಸರಿಯಲ್ಲ.

ಪಿಡಬ್ಲ್ಯೂ-3
ಎಂ ವಿ ಸಿ 447/2018

3. ನಾನು ಡಾ. ಮಹಾಂತಪ್ಪನವರ ಬಳಿ ಚಿಕಿತ್ಸೆ ಪಡೆಯದಿದ್ದರೂ ಸಹ ಮೂಳೆ ಮುರಿತದಿಂದ ಅಂಗನ್ಯೂನತೆ ಉಂಟಾಗಿದೆ ಎಂದು ಸುಳ್ಳು ಪ್ರಮಾಣ ಪತ್ರ ಹಾಜರು ಪಡಿಸಿದ್ದೇನೆ ಅಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರದಲ್ಲಿ ಮೂಳೆ ಮುರಿತದ ಬಗ್ಗೆ ನಮೂದಿಸದಿದ್ದರೂ ಸಹ ಅಂಗನ್ಯೂನತೆ ಪ್ರಮಾಣ ಪತ್ರದಲ್ಲಿ ಮೂಳೆ ಮುರಿತ ಉಂಟಾಗಿದೆ ಎಂದು ಸುಳ್ಳು ಪ್ರಮಾಣ ಪತ್ರ ನೀಡಲಾಗಿದೆ ಅಂದರೆ ಸರಿಯಲ್ಲ . ಹೆಚ್ಚಿನ ಪ್ರಮಾಣದ ಅಂಗನ್ಯೂನತೆಯನ್ನು ತೋರಿಸಲು ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರ ನೀಡಲಾಗಿದೆ ಅಂದರೆ ಸರಿಯಲ್ಲ. ವೈದ್ಯರು ಚಿಕ್ಕಹೋಗಿಹಳ್ಳಿ ಆಸ್ಪತ್ರೆಯ ದಾಖಲೆಗಳನ್ನು ನೋಡದೆ ಕೇವಲ ನನ್ನ ಹೇಳಿಕೆಯ ಮೇಲೆ ಈ ರೀತಿ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರ ನೀಡಿದ್ದಾರೆ ಅಂದರೆ ಸರಿಯಲ್ಲ . ನನಗೆ 25 ರಿಂದ 30 ಪ್ರತಿಶತ ಅಂಗನ್ಯೂನತೆ ಇದೆ ಎಂದು ಸುಳ್ಳು ಪ್ರಮಾಣ ಪತ್ರ ನೀಡಿದ್ದಾರೆ ಅಂದರೆ ಸರಿಯಲ್ಲ .

4. ನಿಪಿ 52 ಎಕ್ಸರೆ ನನಗೆ ಸಂಬಂಧಪಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಬಿಲ್ಲುಗಳನ್ನು ಮತ್ತು ಸಲಹಾ ಚೀಟಿಗಳನ್ನು ಹೆಚ್ಚಿನ ಪರಿಹಾರಕ್ಕಾಗಿ ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಅಂದರೆ ಸರಿಯಲ್ಲ. 1 ನೇ ಎದುರುದಾರ ಸೂಕ್ತ ಚಾಲನಾ ಪರವಾನಿಗೆಯನ್ನು ಹೊಂದಿರಲಿಲ್ಲ ಅಂದರೆ ಸರಿಯಲ್ಲ. ವಾಹನದ ದಾಖಲಾತಿಗಳು ಸರಿ ಇರದ ಕಾರಣ 3 ನೇ ಎದುರುದಾರರು ಪರಿಹಾರ ಪಾವತಿಸಲು ಭಾಧ್ಯಸ್ಥರಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿಂ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.